ಕೊಮತ್ಸು, ಹಿಟಾಚಿ, ತ್ಸುಜಿಕಾವ ಮುಂತಾದ ಕಂಪೆನಿಗಳು ಬೆಂಗಳೂರು ಮತ್ತು ಸುತ್ತಮುತ್ತ ಇವೆ. ಇಲ್ಲಿಯೇ ನೆಲೆಸಿರುವವರಲ್ಲದೆ, ಔದ್ಯಮಿಕ ಅಗತ್ಯಗಳಿಗಾಗಿ ಇಲ್ಲಿಗೆ ಪ್ರತಿ ತಿಂಗಳು ಬಂದು ಹೋಗುವ ಜಪಾನೀಯರ ಸಂಖ್ಯೆ ಸರಾಸರಿ 1800ರಷ್ಟಿದೆ.

ಬೆಂಗಳೂರಿನಲ್ಲಿ ಜಪಾನಿ ವಾತಾವರಣವೂ ಹೆಚ್ಚುತ್ತಿದೆ. ಜಪಾನಿ ಮಾದರಿಯ ಸಾಕ್ರಾ ಆಸ್ಪತ್ರೆ, ಜಪಾನಿ ವಸ್ತುಗಳು ಸಿಗುವ ಕೆಂಕೋಸ್ ಮಳಿಗೆ, ಜಪಾನಿಯರಿಗೆ 'ಹತ್ತಿರ'ವಿರುವ ಟ್ರಯೊ ವರ್ಲ್ಡ್ ಸ್ಕೂಲ್– ಎಲ್ಲವೂ ಬೆಂಗಳೂರಿನ ಜಪಾನೀಯರನ್ನು ತಂಪಾಗಿರಿಸಿವೆ. ಜಪಾನಿನ ಸವಿರುಚಿ ತಿಂಡಿಗಳಾದ 'ತೆಂಪುರ', 'ತೂಶಿ', 'ಮೆರೊಶಿರೊ' ಗಳನ್ನು ಸವಿಯಲು 12ರಷ್ಟು ರೆಸ್ಟೋರೆಂಟ್‌ಗಳೂ ಇವೆ. (ಕೆಲವಕ್ಕೆ ಜಪಾನೀಯರಿಗೆ ಮಾತ್ರ ಪ್ರವೇಶ!) ಜಪಾನ್ ಉದ್ಯಮ ಮತ್ತು ಉದ್ಯಮಿಗಳ ಸಹವರ್ತಿಯಾಗಿ ಇಂಡೊ – ಜಪಾನ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯೂ ಇದೆ. ಬೆಂಗಳೂರಿನಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಪಾನ್ ಹಬ್ಬವಂತೂ ಉಭಯ ಸಂಸ್ಕೃತಿಗಳ ಮೇಳೈಕೆಗೆ ಗಟ್ಟಿ ವೇದಿಕೆಯಾಗಿದೆ.

ಬೆಂಗಳೂರು– ಜಪಾನಿನ ಮೊದಲ ಮದುವೆಗೆ ಈಗ ಏಳು ವರ್ಷ ಕಳೆದಿದೆ. ಜಪಾನ್‌ನ ಕ್ಯೋತೊ ಪ್ರದೇಶದ ಮೇಗುಮಿ ಸಕಕಿದ ಬೆಂಗಳೂರಿಗೆ ಬಂದದ್ದು 9 ವರ್ಷಗಳ ಹಿಂದೆ. ಪ್ರವಾಸಕ್ಕೆಂದು ಬಂದವರು ನಗರವನ್ನು ಮೆಚ್ಚಿ ಇಲ್ಲೇ ನೆಲೆ



ದೀಪಕ್ ಮತ್ತು ಮೇಗುಮಿ ವಿವಾಹ ಸಂಭ್ರಮ

ನಿಂತರು. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಪೇಂಟಿಂಗ್ ವಿಭಾಗದಲ್ಲಿ ಅಧ್ಯಯನಕ್ಕೆ ಸೇರಿದ ಅವರಿಗೆ ಅಲ್ಲೇ ಕನ್ನಡಿಗ ದೀಪಕ್ ಪರಿಚಯವಾಯಿತು. ಅದಕ್ಕೂ ಮುನ್ನ ಅವರು ಕಾರ್ಕಳದಲ್ಲಿ ಮದುವೆಯೊಂದರಲ್ಲಿ ಪಾಲ್ಗೊಳ್ಳಲು ಹೋಗಿದ್ದರು. ಆ ಮದುವೆಯಲ್ಲಿ ಪಾಲ್ಗೊಂಡ ನಂತರವಂತೂ ಭಾರತೀಯ ಶೈಲಿಯಲ್ಲಿ ಮಾಂಗಲ್ಯ ಧರಿಸಬೇಕು ಎಂದು ನಿರ್ಧರಿಸಿದರು. ಸ್ನೇಹಿತನಾದ ದೀಪಕ್ ನಿಧಾನಕ್ಕೆ ಇವರ ಮನಗೆದ್ದರು. ಭಾರತೀಯ ಶೈಲಿಯಲ್ಲೇ ಇಬ್ಬರೂ ಮದುವೆ ಮಾಡಿಕೊಂಡರು. ಈಗ ಇಬ್ಬರು ಮಕ್ಕಳಿದ್ದಾರೆ.

'ಅಯ್ಯೊ, ಬೆಂಗಳೂರಿಗೆ ಮೊದಲು ಬಂದಾಗ ನನಗೆ ಇಂಗ್ಲಿಷ್ ಕೂಡಾ ಗೊತ್ತಿರಲಿಲ್ಲ. ಇಲ್ಲಿ ಬದುಕಲು ಸ್ಥಳೀಯ ಭಾಷೆ ತೀರಾ ಅಗತ್ಯ. ಮೂರು ತಿಂಗಳಲ್ಲಿ ಭಾಷೆ ಮೇಲೆ ಹಿಡಿತ ಸಾಧಿಸಿದೆ' ಎನ್ನುತ್ತಾರೆ ಮೇಗುಮಿ.

'ಬೆಂಗಳೂರಿನಲ್ಲಿದ್ದರೆ ನಮ್ಮೂರಿನಲ್ಲಿ ಇದ್ದಂತೆಯೇ ಭಾಸವಾಗುತ್ತದೆ. ಇಲ್ಲಿಗೆ ಬಂದು ಕೆಲವೇ ತಾಸುಗಳಲ್ಲಿ ಈ ನಗರ ಸಖತ್ ಇಷ್ಟವಾಯ್ತು. ಇಲ್ಲೇ ಇರುವ ಆಸೆ ಚಿಗುರೊಡೆಯಿತು' ಎಂದು ಅವರು ಅಚ್ಚಕನ್ನಡದಲ್ಲೇ ಹೇಳಿದರು.

## ಭಾಷೆ ಕಲಿಕೆಗೆ ಶಾಲೆ

ಭಾರತದಲ್ಲಿ ಜಪಾನ್ ಕಂಪೆನಿಗಳ ವ್ಯವಹಾರ ಹೆಚ್ಚುತ್ತಿದ್ದಂತೆಯೇ ಸ್ಥಳೀಯರಿಗೆ ಅವುಗಳಲ್ಲಿ ಉದ್ಯೋಗಾವಕಾಶವೂ ಹೆಚ್ಚಿತು. ಆ ಕಂಪೆನಿಗಳಲ್ಲಿ ಉನ್ನತ ಹುದ್ದೆ ಅಲಂಕರಿಸಲು ಅಥವಾ ಕಂಪೆನಿಯ ಹಿರಿಯರ ಜೊತೆ ವ್ಯವಹರಿಸಲು ಭಾಷೆಯೇ ಮುಖ್ಯವಾಯಿತು. ಈ ಸಂದರ್ಭದಲ್ಲಿ ಸ್ಥಳೀಯರ ಕೈ ಹಿಡಿಯಲು ಜಪಾನ್ ಭಾಷೆ ಕಲಿಸುವ ಕೇಂದ್ರಗಳು ಮುಂದೆ ಬಂದವು. ಬೆಂಗಳೂರಿನ ಅನೇಕ ಕೇಂದ್ರಗಳಲ್ಲಿ ಜಪಾನೀಸ್ ಭಾಷೆ ಕಲಿಸಿ ಇಂಡೊ–ಜಪಾನ್ ಸೌಹಾರ್ದವನ್ನು ಬಲಪಡಿಸುವ ಕಾರ್ಯ ನಡೆಯುತ್ತಿದೆ.

'ಎನ್–5ನಿಂದ ಎನ್–1 ವರೆಗಿನ ಹಂತಗಳಲ್ಲಿ ಭಾಷೆ ಕಲಿಸಲಾಗುತ್ತದೆ. ಎನ್–3 ಹಂತವನ್ನು ಪೂರ್ತಿಗೊಳಿಸಿದರೆ ಆ ಭಾಷೆಯ ಬಹುಭಾಗ ಕಲಿತಂತೆಯೇ. ಈ ಹಂತದವರೆಗೆ ಸ್ಥಳೀಯರೇ ಕಲಿಸುತ್ತಾರೆ. ಎನ್–2 ಮತ್ತು ಎನ್–1 ಹಂತವನ್ನು ಜಪಾನಿ ಶಿಕ್ಷಕರೇ ಕಲಿಸುತ್ತಾರೆ. ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಇಲ್ಲಿರುವ ಜಪಾನ್ ಕಂಪೆನಿಗಳಲ್ಲಿ ಉನ್ನತ ಹುದ್ದೆಗಳು ಸಿಗುತ್ತವೆ. ಜಪಾನ್‌ನಲ್ಲಿ ಉದ್ಯೋಗ ಮಾಡುವ ಅವಕಾಶವೂ ಲಭಿಸುತ್ತದೆ' ಎನ್ನುತ್ತಾರೆ, ಮಲ್ಲೇಶ್ವರಂನಲ್ಲಿರುವ ಸಕೂರ ನಿಹಾಂಗೊ ಸಂಪನ್ಮೂಲ ಕೇಂದ್ರದ ಸಹ ಸ್ಥಾಪಕಿ ಶ್ರೀವಿದ್ಯಾ ಅನಂತಪದ್ಮನಾಭ.

2008ರಲ್ಲಿ ಕರ್ನಾಟಕದಲ್ಲಿ ಒಟ್ಟು 105 ಜಪಾನೀ ಕಂಪೆನಿಗಳಿದ್ದವು. ನಾಲ್ಕು ವರ್ಷಗಳಲ್ಲಿ ಜಪಾನೀ ಕಂಪೆನಿಗಳ ಸಂಖ್ಯೆ ದುಪ್ಪಟ್ಟಾಗಿ 228ಕ್ಕೆ ಏರಿತು. 2015ರ ಹೊತ್ತಿಗೆ 451ಕ್ಕೆ ಏರಿದ ಜಪಾನೀ ಕಂಪೆನಿಗಳ ಸಂಖ್ಯೆ 2017ರ ಹೊತ್ತಿಗೆ 509 ತಲುಪಿದೆ. ಇಲ್ಲಿಗೆ ದುಡಿಯಲು ಬರುವ ಜಪಾನೀಯರ ಸಂಖ್ಯೆಯೂ ಏರತೊಡಗಿದೆ. ನಮ್ಮವರಿಗೂ ಉದ್ಯೋಗಗಳ ಅವಕಾಶಗಳು ಹೆಚ್ಚಿವೆ. ಟೊಯೊಟಾ ಕಿರ್ಲೋಸ್ಕರ್, ಹೋಂಡಾ, ಫುಜಿತ್ಸು, ಕೊಮತ್ಸು, ಹಿಟಾಚಿ, ತ್ಸುಜಿಕಾವ ಮುಂತಾದ ಕಂಪೆನಿಗಳಲ್ಲಿ ಕನ್ನಡಿಗರೂ ದೊಡ್ಡ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ.

ಭಾರತದಲ್ಲಿ ಅತ್ಯಂತ ಹೆಚ್ಚು ಜಪಾನೀ ಕಂಪೆನಿಗಳು ನೆಲೆ ನಿಂತಿರುವುದು (ಒಟ್ಟು 759) ಮಹಾರಾಷ್ಟ್ರದಲ್ಲಿ. ನಂತರ ಸ್ಥಾನ ಹರಿಯಾಣ (592) ಮತ್ತು ತಮಿಳ್ನಾಡು (582) ರಾಜ್ಯಗಳಿಗೆ. ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ.

## ಎಲ್ಲ ದೇವರೂ ಬೇಕು

ಜಪಾನೀಯರಿಗೆ ಸಂಸ್ಕೃತಿ ಮೇಲೆ ಅಪಾರ ಪ್ರೀತಿ, ನಂಬಿಕೆ. ಧರ್ಮ, ದೇವರು, ಪೂಜೆ–ಪುನಸ್ಕಾರದ ವಿಷಯದಲ್ಲಿ 'ಜಪಾನ್ ಮಾದರಿ' ಅನುಕರಣೀಯ. ಬೌದ್ಧ ಮತ್ತು ಶಿಂಗ್ಟೊ, ಜಪಾನೀಯರು ಅನುಸರಿಸುವ ಎರಡು ಧರ್ಮಗಳು. ಬೌದ್ಧ ಧರ್ಮದ ಅನುಯಾಯಿಗಳು ಬುದ್ಧನನ್ನು ಮಾತ್ರ ಪೂಜಿಸಿದರೆ, ಶಿಂಗ್ಟೊ ಧರ್ಮದರಿಗೆ ಬೆಂಗ್ಟೆಮ್, ಬೆನ್‌ಶೈಥೆಮ್ ದೇವರುಗಳು ಇದ್ದಾರೆ.

ಆದರೆ ನಿಯಮಿತವಾಗಿ ದೇವಸ್ಥಾನಗಳಿಗೆ ಹೋಗುವುದು, ಮನೆಯಲ್ಲಿ ದೇವರ ಚಿತ್ರಕ್ಕೆ ಪೂಜೆ ಸಲ್ಲಿಸುವುದು ಇತ್ಯಾದಿ ರೂಢಿ ಇಲ್ಲ. ಹಬ್ಬ– ಉತ್ಸವದ ಸಂದರ್ಭದಲ್ಲಿ ದೇವಾಲಯಗಳಿಗೆ ಹೋಗಿ ಕೈ ಮುಗಿದು ವಾಪಸಾಗುತ್ತಾರೆ.

ಯಾಕೆ ಹೀಗೆ ಎಂದು ಕೇಳಿದರೆ, 'ನಮಗೆ ದೇವರು ಮತ್ತು ದೇವಾಲಯ ನಂಬಿಕೆಯ ವಸ್ತುವಲ್ಲ; ಸಂಸ್ಕೃತಿಯ ಭಾಗ. ಧರ್ಮವನ್ನು ಸಂಸ್ಕೃತಿಯಾಗಿ ಉಳಿಸಿಕೊಂಡಿದ್ದೇವೆ, ಆಚರಣೆಯಾಗಿ ಅಲ್ಲ' ಎಂಬ ಉತ್ತರ ಬರುತ್ತದೆ.

ಜಪಾನೀಯರಿಗೆ ಎಲ್ಲ ಧರ್ಮಗಳೂ ಒಂದೇ, ಎಲ್ಲರ ದೇವರುಗಳೂ ಅವರದ್ದೇ! ಇತರ ಧರ್ಮಗಳ ದೇವಾಲಯಗಳ ಬಳಿ ಹೋದರೆ ಅಲ್ಲಿನ ಆಚರಣೆಯ ಬಗ್ಗೆ ಕೇಳಿ ತಿಳಿದು ಅದರ ಪ್ರಕಾರ, ಪೂಜೆ, ನಮಸ್ಕಾರ ಸಲ್ಲಿಸಿ ಮುಂದೆ ಸಾಗುವ ಪರಿಪಾಠ ಇಟ್ಟುಕೊಂಡಿದ್ದಾರೆ. ಈ ಕಾರಣದಿಂದಲೇ ಬೆಂಗಳೂರಿನಲ್ಲಿ 'ಜಪಾನ್ ದೇವರ' ಮಂದಿರಗಳಿಲ್ಲ.

ಜಪಾನೀಯರಿಗೆ ಮದುವೆ ವಿಷಯದಲ್ಲೂ ಧರ್ಮ, ಜಾತಿ, ದೇಶ–ಭಾಷೆ ಅಡ್ಡಿಯಾಗುವುದಿಲ್ಲ. ಹೀಗಾಗಿ ವಿವಾಹದ ವಿಷಯದಲ್ಲಿ ಅವರು 'ಸ್ವತಂತ್ರರು'. ಸ್ಥಳೀಯ ಆಹಾರಕ್ಕೆ ಬೇಗನೇ ಹೊಂದಿಕೊಳ್ಳುತ್ತಾರೆ. ಬೆಂಗಳೂರಿಗೆ ಬಂದು ಕೆಲವೇ ವರ್ಷಗಳಲ್ಲಿ ಮುದ್ದೆ, ಬಸ್ಸಾರು, ಕೋಳಿ ಸಾರು, ಅಕ್ಕಿ ರೊಟ್ಟಿ, ನೀರು ದೋಸೆ ಮುಂತಾದವನ್ನು ಮನೆಯಲ್ಲಿ ಮಾಡುತ್ತಿದ್ದಾರೆ. ಜಪಾನ್‌ನ ಆಹಾರ ಮನೆಯಲ್ಲೇ ತಯಾರಿಸಬೇಕೆಂದು ಆಸೆಯಾದರೆ ಇಲ್ಲೂ ಉದೋನ್, ತೆಂಪುರ, ತೋಬಾ ತಯಾರಿಸಲು ಪುಡಿಗಳು ಸಿಗುತ್ತವೆ. ಆದರೆ ಅವು ಸಿಕ್ಕಾಪಟ್ಟೆ ದುಬಾರಿ. ಹೀಗಾಗಿಯೇ ಹೆಚ್ಚಿನವರು ಇದಕ್ಕೆ ಮುಂದಾಗುವುದಿಲ್ಲ.